ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಂಧ್ರ, ಕೇರಳ ಮದ್ರಾಸ್ ರಾಜ್ಯದ ಮಟ್ಟಕ್ಕೆ ಸಣ್ಣ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸಲು ಇನ್ನೂ ಎಷ್ಟು ಅವಧಿ ಬೇಕು ?

ಶ್ರೀ ಆಲೂರು ಹನುಮಂತಪ್ಪ.—ಎಸ್ಟಿಮೇಟು ರೆಡಿ ಮಾಡಿಕೊಂಡಿದ್ದೇವೆ. ಹಣ ಮಂಜೂರು ಮಾಡಿದ ಕೂಡಲೇ ಕೆಲಸ ಕಾರ್ಯಗತ ಮಾಡಲಾಗುವುದು. ಹೆಚ್ಚು ಹಣ ಕೊಡಿ ಎಂದು ಕೇಂದ್ರ ಸರಕಾರವನ್ನು ಸಹ ಕೇಳುತ್ತಿದ್ದೇವೆ.

Sri SIDDIAH KASIMATH.—What is the amount spent for Lift Irrigation during 1962-63 ?

Sri ALUR HANUMANTHAPPA.—That information is not with me.

ಶ್ರೀ ಇ. ನಾರಾಯಣ ಗೌಡ.—ಈ ಯೋಜನೆಯಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ಸರ್‌ಪ್ಲಸ್ ಆಗಿದೆ, ಕೆಲಸವಿಲ್ಲವೆಂದು ಕಾಣುತ್ತದೆ. ತಾಲ್ಲೂಕು ಬೋರ್ಡುಗಳಿಗೆ ಕೆಲಸ ವಹಿಸಿಕೊಟ್ಟ ಮೇಲೆ ಕೆಲಸ ನಿಂತು ಹೋಗಿದೆ. ಇದು ಗಮನಕ್ಕೆ ಬಂದಿದೆಯೇ ?

Mr. SPEAKER.—It does not arise. Any way it may be answered.

ಶ್ರೀ ಆಲೂರು ಹನುಮಂತಪ್ಪ.—ಸಿಬ್ಬಂದಿ ಸರ್‌ಪ್ಲಸ್ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಸಬ್ ಡಿವಿಜನ್ನಿನಲ್ಲಿರುವ ಸಿಬ್ಬಂದಿ ನಾಲ್ಕೈದು ಹೋಬಳಿ ನೋಡಿಕೊಳ್ಳಬೇಕಾಗುತ್ತದೆ. ಹೊಸ ಕೆರೆಗಳ ನಿರ್ಮಾಣ ಕೆಲಸ ಇರುತ್ತದೆ. ಆದ್ದರಿಂದ ಜಾಸ್ತಿ ಕೆಲಸ ಇದೆ ಎಂದು ಮನವರಿಕೆಯಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮದ್ರಾಸ್, ಆಂಧ್ರ, ಕೇರಳ ರಾಜ್ಯಗಳು ಕೇಂದ್ರದಿಂದ ಹಣ ತೆಗೆದುಕೊಂಡು ಕೆಲಸ ಪ್ರಾರಂಭಿಸಿವೆ. ಕೇಂದ್ರ ಸರಕಾರ ನಮ್ಮ ರಾಜ್ಯಕ್ಕೆ ಇನ್ನೂ ಹಣ ಏಕೆ ಕೊಟ್ಟಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ನಮಗೂ ಹಣ ಬರುತ್ತದೆ. ಇನ್ನೂ ಹೆಚ್ಚಿಗೆ ಹಣ ಕೊಡಿ ಎಂದು ಅವರನ್ನು ಕೇಳುತ್ತಿದ್ದೇವೆ.

Steps taken to get adequate transport facilities for the State.

*Q.—1139. Sri GANGADHAR NAMOSHI (Gulbarga).—

Will the Government be pleased to state.—

(*a*) whether the Minister for Industries has stated that considerable amount of trade is diverted to neighbouring State on account of lack of transport facilities, etc., in the State ;

(*b*) whether any estimate has been made by the Government in this regard ;

(*c*) the steps they have taken to get adequate transport facilities for the State (such as broad guage, mileage increment, new rail link, etc.) ?

A.—Sri K. MALLAPPA (Minister for Industries and Commerce).—

(*a*) Yes.

(*b*) No.

(*c*) Every opportunity is being taken to press on the Central Government the need for adequate transport and port facilities for the State.

ಶ್ರೀ ಗಂಗಾಧರ ನಾಮೋಷಿ.—(ಇ)ಗೆ ಉತ್ತರವಾಗಿ ಕೇಂದ್ರ ಸರಕಾರವನ್ನು ನಮಯ ದೊರೆಕಿದಾಗಲೆಲ್ಲಾ ಒತ್ತಾಯ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ, ನಿಮ್ಮ ಒತ್ತಾಯಕ್ಕೆ ಕೇಂದ್ರ ಸರಕಾರದವರೇನಾದರೂ ಮಾನ್ಯತೆ ಕೊಟ್ಟಿದ್ದಾರೆಯೇ ? ಅದಕ್ಕೇನಾದರೂ ಮಾನ್ಯತೆ ಉಂಟೇ ? ಇದ್ದರೆ ಇದುವರೆಗೂ ಯಾವ ಯಾವ ಕೇಳಿಕೆಯ ಮೇಲೆ ಅವರು ಮಾನ್ಯತೆ ಕೊಟ್ಟಿದ್ದಾರೆ ?

Mr. SPEAKER.—The question is disallowed. The Central Government has every respect for the State Government. There is no doubt about it.

ಶ್ರೀ ಗಂಗಾಧರ ನಾವೋಷಿ.—ಹಾಗಾದರೆ ಪೂನಾದಿಂದ ಬೆಂಗಳೂರಿನವರೆಗೆ ಬ್ರಾಡ್‌ಗೇಜ್ ಹಾಕುತ್ತೇವೆ ಎಂದು ಹೇಳಿದ್ದುದನ್ನು ಪತ್ರಿಕೆಯಲ್ಲಿ ಓದಿದ್ದೆವು ಮತ್ತು ಆ ರೀತಿ ಒಂದು ಭರವಸೆಯನ್ನು ಕೊಟ್ಟಿದ್ದಾರೆ ಎಂದು ಈ ಸಭೆಯಲ್ಲೂ ಹೇಳಿದ್ದಿರಿ. ಈಗ ಕೇಳುತ್ತಾ ಇದ್ದೇವೆ, ಅದು ಪೂನಾದಿಂದ ಮಿರಜ್‌ವರೆಗೆ ಮಾತ್ರ ಹಾಕುತ್ತಾರೆ ಮತ್ತು ಅದನ್ನು ಮುಂದುವರಿಸುವುದಿಲ್ಲ ಎಂದು. ಇದಕ್ಕೆ ಕಾರಣವೇನು ? ಈ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

† ಶ್ರೀ ಕೆ. ಮಲ್ಲಪ್ಪ.—ಬೆಂಗಳೂರಿನಿಂದ ಪೂನಾದವರೆಗೂ ಬ್ರಾಡ್‌ಗೇಜ್ ಮಾಡಬೇಕೆಂದು ಇಂಡಿಯಾ ಸರ್ಕಾರದವರಿಗೆ ಹೇಳಿದ್ದೇವೆ.

ಶ್ರೀ ಗೋಪಾಲರಾವ್ ಮುಡಬಿ.—ಗುಂತಕಲ್‌ನಿಂದ ಬಳ್ಳಾರಿಯವರೆಗೆ ಬ್ರಾಡ್‌ಗೇಜ್ ಹಾಕುತ್ತಾರೆಯಂತೆ, ಇದನ್ನು ಹುಬ್ಬಳ್ಳಿಯವರೆಗೂ ಹಾಕಬೇಕೆಂದು ಏಕೆ ಇಂಡಿಯಾ ಸರ್ಕಾರದವರನ್ನು ಕೇಳಿಕೊಳ್ಳಲಿಲ್ಲ ?

ಶ್ರೀ ಕೆ. ಮಲ್ಲಪ್ಪ. – ಹುಬ್ಬಳ್ಳಿಯವರೆಗೂ ಬ್ರಾಡ್‌ಗೇಜ್ ಮಾಡಬೇಕೆಂದು ಕೇಳಿಕೊಂಡಿದ್ದೇವೆ.

Sri S. SIVAPPA.—You were pleased to state that every opportunity was being taken to press on the Central Government the need for adequate transport facilities. As a result of your request and your pressure brought upon the Central Government what is the reply given by the Central Government and how far it is favourable to your request ?

Sri K. MALLAPPA.—Mangalore Port has already been taken up ; it is going on. In regard to Hassan—Mangalore Railway, survey has been completed. Work is to begin.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಬಳ್ಳಾರಿಯಿಂದ ಹುಬ್ಬಳ್ಳಿಯವರೆಗೂ, ಪೂನಾದಿಂದ ಹುಬ್ಬಳ್ಳಿಯವರೆಗೂ ಬ್ರಾಡ್‌ಗೇಜ್ ರೈಲ್ವೆ ಹಾಕಬೇಕೆಂದು ಕೇಳಿಕೊಂಡದ್ದಕ್ಕೆ ಅವರ ಉತ್ತರ ಏನು ಬಂದಿದೆ!

ಶ್ರೀ ಕೆ. ಮಲ್ಲಪ್ಪ.—ಅದನ್ನು ಪರಿಶೀಲಿಸುತ್ತಾ ಇದ್ದಾರೆ. ಹುಬ್ಬಳ್ಳಿಯಿಂದ ಪೂನಾದವರೆಗೂ ಬ್ರಾಡ್‌ಗೇಜ್ ಮಾಡಬೇಕೆಂದು ಹೇಳುವುದಕ್ಕೆ ಸ್ಪಷ್ಟವಾಗಿ ಇಲ್ಲ ಎಂದೂ ಉತ್ತರ ಬಂದಿಲ್ಲ, ಹೌದು ಎಂದೂ ಬಂದಿಲ್ಲ, ಪರಿಶೀಲಿಸುತ್ತಾ ಇದ್ದಾರೆ.

Sri C. J. MUCKANNAPPA.—With reference to (b) as to whether any estimate has been made in this regard, you say 'No'.

ಎಷ್ಟು ಪ್ರಮಾಣದಲ್ಲಿ ನಮ್ಮ ವ್ಯಾಪಾರ ಬೇರೆ ಕಡೆಗೆ ಡೈವರ್ಟ್ ಆಗಿದೆ ?

ಶ್ರೀ ಕೆ. ಮಲ್ಲಪ್ಪ.—ಅದನ್ನು ಹೇಗೆ ಹೇಳಲಕ್ಕೆ ಆಗುತ್ತದೆ ? ಪೋರ್ಟ್ ಮತ್ತು ರೈಲ್ವೆ ಅನುಕೂಲತೆ ಇಲ್ಲದೇ ಇದ್ದದ್ದರಿಂದ ನಮ್ಮ ವ್ಯಾಪಾರವೆಲ್ಲಾ ಬೇರೆ ಕಡೆಗೆ ಹೋಗಿದೆ—ಅದು ಎಷ್ಟು ಮಟ್ಟಿಗೆ ಹೋಗಿದೆ ಎಂಬುದನ್ನು ಅಳತೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಂಡಿಯಾ ಸರ್ಕಾರದವರನ್ನು ಕೇಳಿಕೊಂಡಿದ್ದೇವೆ ಎಂದು ಹೇಳಿದ್ದೀರಿ. ನಿನ್ನೆ ರೈಲ್ವೆ ಮಂತ್ರಿಗಳು ತುರುವೇಕೆರೆಗೆ ಬಂದಿದ್ದಾಗ ತಮಗೆ ಸಿಕ್ಕಿದ್ದರೆ ? ತಾವು ಅವರನ್ನು ಈ ವಿಷಯದಲ್ಲಿ ಕೇಳಿಕೊಂಡಿರಾ ?

ಅಧ್ಯಕ್ಷರು.—ರೈಲ್ವೆ ಮಂತ್ರಿಗಳು ಯಾರು ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶ್ರೀವರ್ಮಾ ಎಚ್. ಸಿ. ದಾನಪ್ಪನವರು, ಸಚಿವರು.

Sri SANJEEVANATH AIKALA.—The Railway Minister has come down to Turuvekere in connection with the bye-election.

Mr. SPEAKER.—Let us not talk lightly of persons who are not here.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ರಾಜ್ಯದಲ್ಲಿ ಸಾಕಾಗಿ ಸೌಲಭ್ಯ ಇಲ್ಲದೇ ಇರುವುದರಿಂದ ಈ ರೈಲ್ವೆ ಅನುಕೂಲತೆಯನ್ನು ಒದಗಿಸುತ್ತಾರೆ ಎಂದು ಹೇಳಿದಿರಿ. ಈಗ ಸರ್ಕಾರದವರು ಏನೇನು ರೈಲ್ವೆ ಅನುಕೂಲತೆಯನ್ನು ಒದಗಿಸಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಸಾರಿಗೆ ಸೌಕರ್ಯ ಒದಗಿಸಬೇಕೆಂಬ ಬಗ್ಗೆ ಆಲೋಚನೆ ಮಾಡಿದ್ದಾರೆ. ಪೋರ್ಟ್ ಮತ್ತು ರೈಲ್ವೆ ಸೌಕರ್ಯ ಹೆಚ್ಚಾಗಿ ಇಲ್ಲದೇ ಇದ್ದುದರಿಂದ ನಮ್ಮ ದೇಶಕ್ಕೆ ಏನು ವ್ಯಾಪಾರವಾಗಬೇಕಾಗಿತ್ತೋ ಅದು ಆಗದೆ ಬೇರೆ ಕಡೆಗೆ ಹೋಗುತ್ತಾ ಇದೆ ಎಂಬುದು ತಿಳಿದುಬಂದು ಈ ಸೌಕರ್ಯವನ್ನು ತಕ್ಷಣ ಒದಗಿಸಬೇಕೆಂದು ಇಂಡಿಯಾ ಸರ್ಕಾರದವರನ್ನು ಆಗಿಂದಾಗ್ಗೆ ಕೇಳಿಕೊಳ್ಳುತ್ತಾ ಇದ್ದೇವೆ.

ಶ್ರೀ ಇ. ನಾರಾಯಣಗೌಡ.—ನಾವು ಭಾರತದ ಇತರ ರಾಷ್ಟ್ರಗಳೊಡನೆ ನಮ್ಮ ರಾಷ್ಟ್ರವನ್ನು ಹೋಲಿಸಿದರೆ 16 ವರ್ಷಗಳಿಂದೀಚೆಗೆ ಒಂದು ಮೈಲಿ ರೈಲ್ವೆ ಲೈನೂ ಸಹ ನಮ್ಮ ದೇಶದಲ್ಲಿ ಆಗಿಲ್ಲ, ಕೇಂದ್ರ ಸರ್ಕಾರದವರನ್ನು ಪದೇ ಪದೇ ಪ್ರಾರ್ಥನೆ ಮಾಡುತ್ತಾ ಇದ್ದೇವೆ ಎಂದು ಹೇಳುತ್ತೀರಿ. ಈಗಲಾದರೂ ನಮ್ಮ ಸಂಸ್ಥಾನಕ್ಕೆ ರೈಲ್ವೆ ಲೈನು ಕೊಡುತ್ತಾರೆ ಎಂದು ಯಾವ ಗಟ್ಟಿಯಾದ ಆಧಾರದಮೇಲೆ ಹೇಳುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ನಮಗೂ ಕೇಂದ್ರದವರಿಗೂ ಒಂದು ಸಂಬಂಧ ಏನಿದೆಯೋ ಅದರ ಆಧಾರದ ಮೇಲೆ ಹೇಳುತ್ತಾ ಇದ್ದೇವೆ.

Mr. SPEAKER.—The Hon'ble Member must remember the topic. It is a Central Subject. If the Hon'ble Member talks about implementation, I would say that the question does not arise.

ಶ್ರೀ ಇ. ನಾರಾಯಣಗೌಡ.—ಈಗಲೂ ರಾಜ್ಯ ಸರ್ಕಾರದವರು ನಾವು ಸಂಸ್ಥಾನದಲ್ಲಿ ಹೆಚ್ಚಿಗೆ ರೈಲ್ವೆ ಲೈನು ಹಾಕಿಸುತ್ತೇವೆ ಎಂದು ಯಾವ ಗಟ್ಟಿ ಆಧಾರದಮೇಲೆ ಹೇಳುತ್ತಾರೆ ?

ಶ್ರೀ ಕೆ. ಮಲ್ಲಪ್ಪ.—ನಮ್ಮ ಅವಶ್ಯಕತೆಯನ್ನು ಅವರ ಮುಂದೆ ಇಟ್ಟಿದ್ದೇವೆ, ನಮ್ಮ ಅವಶ್ಯಕತೆ ಅವರಿಗೆ ಗೊತ್ತಿದೆ. ಅದರಮೇಲೆ ಅವರಿಗೂ ನಮಗೂ ಇರತಕ್ಕ ಯಾವ ಒಂದು ಸಂಬಂಧ ಇದೆ ಎಂದರೆ,

The State and the Centre have got constitutional relationship and we have represented our difficulties to the Government of India and the Government of India have understood our difficulties. On that basis I say that there will be Ports and Railways required by the State.

ಶ್ರೀ ಎ. ಕೃಷ್ಣಶೆಟ್ಟಿ.—ಕೇಂದ್ರ ಸರ್ಕಾರದವರು ನಮ್ಮ ಕಷ್ಟಸುಖಗಳನ್ನು ಅರಿತು ಅವುಗಳನ್ನು ನಿವೃತ್ತಿಮಾಡಲಿಕ್ಕೆ ಈ ಕೆಲಸಗಳನ್ನು ಮಾಡುತ್ತಾರೆ ಎಂದು ತಾವು ಹೇಳುತ್ತೀರಿ. ಈಗ ನಮಗೆ ಬೇಕಾಗಿರುವುದು ಇಂತಹ ಲೋಕಾಭಿರಾಮವಾದ ಉತ್ತರವಲ್ಲ, ಸ್ಪಷ್ಟವಾಗಿ ಏನೆಲ್ಲಾ ಇಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಆಗಲೇ ಹೇಳಿದ್ದೇನೆ, ಮಂಗಳೂರು ಪೋರ್ಟ್‌ನಿಂದ ಕೆಲಸ ಪ್ರಾರಂಭ ಮಾಡಿದ್ದಾರೆ, ಹಾಸನ—ಮಂಗಳೂರು ರೈಲ್ವೆ ಲೈನ್ ಸರ್ವೇ ನಡೆದಿದೆ ಅದು ಶೀಘ್ರದಲ್ಲಿ ಕಾರ್ಯರೂಪದಲ್ಲಿ ಬರುತ್ತದೆ.

ಶ್ರೀ ಎ. ಕೃಷ್ಣಶೆಟ್ಟಿ.—ನಮಗೆ ಮಂಗಳೂರು—ಹಾಸನ ರೈಲ್ವೆ ಆಗಬೇಕು.

ಶ್ರೀ ಕೆ. ಮಲ್ಲಪ್ಪ.—ಅದು ಕಾರ್ಯರೂಪದಲ್ಲಿ ಬರುತ್ತದೆ.

ಶ್ರೀ ಎಸ್. ಶಿವಪ್ಪ.—ನುಮಾರು ಕಾಲು ಶತಮಾನದಿಂದ ಹಾಸನ—ಮಂಗಳೂರು ರೈಲ್ವೆ ವಿಚಾರ ಒಂದೇ ನಮನೆ...

Mr. SPEAKER.—The Hon'ble Member is asking for something else.

Sri S. SIVAPPA.—Will the Government be pleased to state what new railway link has been put up in the Mysore State after 1947 ?

Sri K. MALLAPPA.—I do not know whether any new railway line has been put up in the Mysore State after 1947.

Mr. SPEAKER.—It is well within the knowledge of the Hon'ble Leader of the Opposition.

ಶ್ರೀ ಸಿದ್ಧಯ್ಯ ಕಾಶೀಮಠ್.—ಗುಂತಕಲ್—ಹೊಸಪೇಜೆ ಬ್ರಾಡ್‌ಗೇಜನ್ನು ಹುಬ್ಬಳ್ಳಿಯವರೆಗೂ ಮುಂದುವರಿಸಬೇಕೆಂಬ ಒಂದು ಕೋರಿಕೆಯನ್ನು ಕೇಂದ್ರ ಸರ್ಕಾರದವರ ಮುಂದೆ ಇಟ್ಟಿದ್ದೇವೆ ಎಂದು ಹೇಳಿದಿರಿ, ಕೇಂದ್ರ ಸರ್ಕಾರದವರು ಅದರ ಬಗ್ಗೆ ಏನು ಉತ್ತರ ಕೊಟ್ಟಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಅದನ್ನು ಪರಿಶೀಲಿಸುತ್ತಾ ಇದ್ದಾರೆ ಇನ್ನೂ ಜವಾಬು ಬಂದಿಲ್ಲ. It is being examined. They have not given any reply, either yes or no.

ಶ್ರೀ ಎ. ಜೆ. ದೊಡ್ಡಮೇಟಿ.—1959ನೆಯ ಇಸವಿಯಲ್ಲಿ ಈ ವಿಧಾನ ಸಭೆಯಲ್ಲಿ ಇಂತಿಂತಹ ರೈಲ್ವೆ ಲೈನುಗಳನ್ನೇ ತೆಗೆದುಕೊಳ್ಳಬೇಕೆಂದು ಹೇಳಿ ಒಂದು ನಿರ್ಣಯ ಅಂಗೀಕಾರವಾದ್ದರಲ್ಲ ಗದಗ್—ರಾಯಚೂರು ರೈಲ್ವೆ ಬಗ್ಗೆ ಒಂದು ತೀರ್ಮಾನವಾಗಿದೆ, ಆ ಬಗ್ಗೆ ರಾಜ್ಯ ಸರ್ಕಾರದವರು ಅದನ್ನು ಕೇಂದ್ರ ಸರ್ಕಾರದವರಿಗೆ ತಿಳಿಸಿದ್ದಾರೆಯೇ? ಕೇಂದ್ರ ಸರ್ಕಾರದವರ ಪ್ರತಿಕ್ರಿಯೆ ಏನು? ಅದು ಒಂದಾದರೂ ಕನಸು ನನಸು ಆಗುವ ಸಂಭವ ಇದೆಯೇ?

ಶ್ರೀ ಕೆ. ಮಲ್ಲಪ್ಪ.—ಕನಸು ನನಸು ಆಗಿದೆ, ಅನೇಕ ಸಂದರ್ಭಗಳಲ್ಲಿ. ಆ ಆಧಾರದಮೇಲೆ ನ್ಯಾಯವಾದ ಬೆಂಬಲ ಇದೆ, ಅದು ಕಾರ್ಯ ರೂಪಕ್ಕೆ ಬರುತ್ತದೆ ಎಂದು ಹೇಳಬಹುದು. ಗದಗ್—ರಾಯಚೂರು ರೈಲ್ವೆ ಲೈನು ಆಗಬೇಕೆಂದು ಕೇಂದ್ರ ಸರ್ಕಾರದವರಿಗೆ ತಿಳಿಸಿದ್ದೇವೆ.

Sri K. S. SURYANARAYANA RAO.—Is it not a fact that in spite of repeated requests, damands and representations made, in the matter of laying railway lines, the present programme of laying new railway line is only intended to divert it from the State to the neighbouring State?

Sri K. MALLAPPA.—I cannot say the intention, but I can only say that the result is that the trade is likely to be diverted.

Sri GANJI VEERAPPA.—Is it true that there is a proposal to convert the metre guage line to broad guage between Miraj and Hubli and will it be extended up to Bangalore?

Sri K. MALLAPPA.—We have requested the Centre to extend the broad guage line up to Hubli.

1-30 P.M.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಷಾ.—ಹುಬ್ಬಳ್ಳಿಯಿಂದ—ಬಿಜಾಪುರ, ಸೋಲಾಪುರ ಕಡೆ ಹೋಗತಕ್ಕ ರೈಲ್ವೆ ದಾರಿ ಮಧ್ಯೆ ಇರತಕ್ಕ ಸೇತುವೆಗಳು ಬಹಳ ಹಳೇಯವಾಗಿರುವುದರಿಂದ ಕೇವಲ ಚಿಕ್ಕ ಎಂಜಿನ್ ಹಾಕುತ್ತಾರೆ. ಆದರಿಂದ ರೈಲ್ವೆ ಪ್ರಯಾಣ ಬಹಳ ನಿಧಾನವಾಗುತ್ತಿದ್ದು, ಬಾಗಿಲುಕೋಟೆಗೆ ಹೋಗಲು 10-11 ತಾಸು ಹಿಡಿಯುತ್ತದೆ. ಈ ತೊಂದರೆ ತಪ್ಪಿಸಲು ಸರ್ಕಾರದವರಿಗೆ ಶಕ್ಯವಿಲ್ಲವೇ?

ಶ್ರೀ ಕೆ. ಮಲ್ಲಪ್ಪ.—ಸದಸ್ಯರು ಕೊಟ್ಟಿರತಕ್ಕ ಸಲಹೆಯನ್ನು ರೈಲ್ವೆಮಂತ್ರಿಗಳಲ್ಲಿ ವಿಚಾರ ಮಾಡುತ್ತೇವೆ.

Sri K. DEVIAH.—Will this Government move the Central Government to have railway track in Bangalore City?

ಶ್ರೀ ಕೆ. ಮಲ್ಲಪ್ಪ.—ಈ ವಿಚಾರವನ್ನು ನಾವು ರೈಲ್ವೆ ಮಂತ್ರಿಗಳಲ್ಲಿ ಚರ್ಚೆ ಮಾಡಿದ್ದೇವೆ. ಇದನ್ನು ಪರಿಶೀಲನೆಮಾಡುವುದಾಗಿ ಆಶ್ವಾಸನ ಕೊಟ್ಟಿದ್ದಾರೆ.

ಶ್ರೀ ಶರಣಪ್ಪ.—ಬಹಳ ದಿವಸಗಳ ಹಿಂದೆಯೇ ಷಹಬಾದ್-ಹುಬ್ಬಳ್ಳಿ ರೈಲ್ವೆ ಲೈನು ಹಾಕಲು ಸರ್ವೆ ಇತ್ಯಾದಿ ಕೆಲಸಗಳೆಲ್ಲಾ ಮುಗಿದಿವೆ. ಆ ವಿಚಾರವೇನಾದರೂ ಸರ್ಕಾರದ ಮುಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಆ ವಿಚಾರ ಸರ್ಕಾರದ ಮುಂದಿಲ್ಲ. ಚಾಮರಾಜ ನಗರ—ಸತ್ಯಮಂಗಲ, ಹಾಸನ-ಮಂಗಳೂರು, ಗದಗ್—ರಾಯಚೂರು, ಧಾರ್ವಾಡ—ಹುಬ್ಬಳ್ಳಿ, ಈ ಲೈನುಗಳನ್ನೆಲ್ಲಾ ಕೇಳಿದ್ದೇವು.

ಶ್ರೀ ಗೋಪಾಲರಾವ್ ಮುಡಬಿ.—ಬೀದರ್‌ನಿಂದ ಮೈನೂರಿನ ಇತರ ಜಿಲ್ಲಾ ಕಡೆಗಳಿಗೂ ಹೋಗಲು ಒಂದು ರೋಡು ಸಹಿತ ಇಲ್ಲ ಎಂಬುದು ತಮಗೆ ಗೊತ್ತಿದೆಯೇ?

ಶ್ರೀ ಕೆ. ಮಲ್ಲಪ್ಪ.—ಬೀದರಿನಿಂದ ಹೈದರಾಬಾದ್ ಮತ್ತು ಗುಲ್ಬರ್ಗಾಕ್ಕೆ ರಸ್ತೆ ಇದೆ.

Sri VEERENDRA PATIL (Minister for Public Works).—Sir, at present there is no direct road from Bidar to Gulbarga. One has to pass *via* Andhra Pradesh. Road is under construction and we are expecting that within one or two years, the road would be finalised.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಈಗ ಹಾಸನ—ಮಂಗಳೂರು ರೈಲ್ವೆ ಲೈನು ಮುಂಜೂರಾಗಿದೆಯೇ?

ಶ್ರೀ ಕೆ. ಮಲ್ಲಪ್ಪ.—ಮುಂಜೂರಾಗಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಬೆಂಗಳೂರು, ಚಿಂತಾಮಣಿ, ಚಿಕ್ಕಬಳ್ಳಾಪುರ ಈ ರೈಲನ್ನು ಬ್ರಾಡ್‌ಗೇಜ್ ಮಾಡುತ್ತೇವೆಂದು ಹೇಳಿದರು. ಈ ಬಗ್ಗೆ ಸರ್ಕಾರದವರೇನು ಕಾರ್ಯಕ್ರಮ ಕೈಗೊಂಡಿದ್ದಾರೆ ?

Sri K. MALLAPPA.—I do not know whether this question will ever arise because the question is about trade being diverted elsewhere.

Mr. SPEAKER.—There is ample time and that is why I am allowing these supplementaries.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕಡೂರು—ಚಿಕ್ಕಮಗಳೂರು—ಸಕಲೇಶಪುರ ರೈಲ್ವೆ ಲೈನನ್ನು ಹಾಕಲು ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಎ. ಕೃಷ್ಣ ಶೆಟ್ಟಿ.—ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ರೈಲ್ವೆ ಲೈನುಗಳನ್ನು ಶಿಫಾರ್ಸ್ ಮಾಡಬೇಕೆಂದಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ನಾವಿನ್ನೂ ಆ ವಿಚಾರವನ್ನು ಆಲೋಚನೆ ಮಾಡಿಲ್ಲ. ಎಲ್ಲ ಸ್ನೇಹಿತುಗಳವರೂ ಕೇಳುತ್ತಿರುವಂತೆ ನಾವೂ ಕೇಳಿದ್ದೇವೆ. ಈ ವಿಚಾರ ಮಾನ್ಯ ಸದಸ್ಯರುಗಳಿಗೂ ಗೊತ್ತಿದೆ. ಆದರೆ ನಾವು ಎಷ್ಟೋ ರೈಲ್ವೆ ಲೈನುಗಳನ್ನು ಕೇಳುತ್ತೇವೆ. ನಾವು ಕೇಳಿದ್ದನ್ನೆಲ್ಲಾ ಅವರು ಸೇರಿಸುವುದಿಲ್ಲ. ನಮ್ಮ ಆರ್ಥಿಕಾಭಿವೃದ್ಧಿಗೆ ಎಷ್ಟು ಅಗತ್ಯವೋ ಅಷ್ಟನ್ನು ಅವರು ಮಾಡೇ ಮಾಡುತ್ತಾರೆ. ಅದಕ್ಕೆ ನಾವು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಂಧ್ರ, ಮದ್ರಾಸ್, ಪಂಜಾಬ್ ಈ ರಾಜ್ಯಗಳವರಿಗೆ ಎಲ್ಲಾ ವಿಚಾರಗಳಲ್ಲೂ ಹೆಚ್ಚಿನ ಪಾಲು ಸಿಕ್ಕುತ್ತಿದೆ. ನಮ್ಮ ಮೈಸೂರಿಗೆ ಪ್ರತಿಯೊಂದು ಬಾಬಿನಲ್ಲೂ ನಮ್ಮ ಕೋಟ ನಮಗೆ ಸಿಕ್ಕುತ್ತಿಲ್ಲ. ಅದಕ್ಕಾಗಿ ತಾವೆಲ್ಲರೂ ರಾಜೀನಾಮೆ ಕೊಡುತ್ತೀರಾ ?

Mr. SPEAKER.—How does the question of resignation arise ? Does the member want the Government to walk-out ? He can walk-out, but if the Government walks-out, what am I to do ? (laughter)

ಶ್ರೀ ವೀರೇಂದ್ರ ಪಾಟೀಲ್.—ಮೈಸೂರಿನವರಿಗೆ ರೈಲ್ವೆ ವಿಚಾರದಲ್ಲಿ ನ್ಯಾಯ ದೊರೆತಿಲ್ಲ ಎಂಬ ಅಂಶವನ್ನು ನಾವಾಗಲೇ ಕೇಂದ್ರಕ್ಕೆ ಮನವರಿಕೆಮಾಡಿದ್ದೇವೆ. ಅದಕ್ಕಾಗೇ ಈಗ ಅವರು ನಮ್ಮ ಬೇಡಿಕೆಗೆ ಮಾನ್ಯತೆ ಕೊಡಲೇಬೇಕಾಗಿದೆ. ವರ್ಷ ವರ್ಷ ಇಂತಿಷ್ಟು ಎಂದು ಕೊಡುತ್ತಿದ್ದಾರೆ. ಈಗಾಗಲೇ ಬೆಂಗಳೂರು—ಸೇಲಂ ರೈಲ್ವೆ, ಮಂಗಳೂರು—ಹಾಸನ ರೈಲ್ವೆ ಲೈನುಗಳನ್ನು ಕಾರ್ಯಗತ ಮಾಡಲು ಮುಂದೆ ಬಂದಿದ್ದಾರೆ.

Mr. SPEAKER.—Before any further supplementaries are put, the Member must compliment the Government that they are forwarding the dabates on the non-official resolution regarding the subject which was adopted by the council.

ಶ್ರೀ ವೀರೇಂದ್ರಪಾಟೀಲ್.—ರೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ಹಾಗೂ ಕೌನ್ಸಿಲ್ಲಿನಲ್ಲಿ ಮೈಸೂರು ದೇಶಕ್ಕೆ ಸಾಕಾದಷ್ಟು ರೈಲಿನ ಅನುಕೂಲಗಳನ್ನು ಕೇಂದ್ರ ಸರಕಾರದವರು ಮಾಡಿಕೊಡುತ್ತಿಲ್ಲ ಎನ್ನುವ ಖಾಸಗಿ ನಿರ್ಣಯ ಇಲ್ಲಿ ಬಂದಿದ್ದಾಗ ನಾನಾಗಲೇ ಒಪ್ಪಿಕೊಂಡು ಹೇಳಿದ್ದೆ. ಅಲ್ಲದೆ ಈ ಸಭೆಯಲ್ಲಿ ನಡೆದ ಕನ್ನಡದಲ್ಲಿದ್ದ ಪ್ರೊಸೀಡಿಂಗ್ಸ್‌ನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿಸಿ ಅದನ್ನು ದೆಹಲಿಯಲ್ಲಿರುವ ಎಲ್ಲಾ ಪಾರ್ಲಿಮೆಂಟು ಸದಸ್ಯರುಗಳಿಗೂ ಮತ್ತು ಕೇಂದ್ರ ಸರಕಾರಕ್ಕೂ ಕೂಡ ಕಳುಹಿಸಿಕೊಡಲಾಗಿದೆ. ಇದರ ಬಗ್ಗೆ ನಮಗೆ ಅನ್ಯಾಯವಾಗಿದೆ ಎನ್ನುವುದನ್ನು ತಿಳಿದುಕೊಳ್ಳುವ ಸಲುವಾಗಿಯೇ ಅಲ್ಲಿಗೆ ಈ ಪ್ರೊಸೀಡಿಂಗ್ಸುಗಳನ್ನು ಕಳುಹಿಸುವ ವ್ಯವಸ್ಥೆ ಮಾಡಿದ್ದು.

ಶ್ರೀ ಜಿ. ಎ. ಗೌಡ.—ತಾವು ನಿರ್ಣಯದ ಬಗ್ಗೆ ದೆಹಲಿಯಲ್ಲಿರುವ ನಮ್ಮ ಭಾಗದ ಪಾರ್ಲಿಮೆಂಟಿನ ಸದಸ್ಯರುಗಳಿಗೆ ಸಾಕಾದಷ್ಟು ಮಾಹಿತಿಗಳನ್ನು ಕೊಟ್ಟು ಒತ್ತಾಯ ಮಾಡಬೇಕೆಂದು ತಿಳಿಸಿದ್ದೀರಾ ?

ಶ್ರೀ ವೀರೇಂದ್ರಪಾಟೀಲ್.—ಈಗಾಗಲೇ ಸಾಕಾದಷ್ಟು ಲಿಟರೇಚರುಗಳನ್ನು ಕೇಂದ್ರ ಸರಕಾರಕ್ಕೆ ಮಾಡಿರುವ ಪತ್ರ ವ್ಯವಹಾರಗಳನ್ನು ನಮ್ಮ ಮೈಸೂರು ಭಾಗದ ಪಾರ್ಲಿಮೆಂಟು ಸದಸ್ಯರಿಗೆ ಕೊಡಲಾಗಿದೆ. ಅಲ್ಲದೆ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದಾಗ ಕೇಂದ್ರ ಸರಕಾರದ ಮೇಲೆ ಒತ್ತಾಯ ಮಾಡಿದ್ದಾರೆ. ನಾನು ಹೋದಾಗಲೂ ಸಹ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ

ಬಂದಿದ್ದೇನೆ. ಅಲ್ಲದೆ ನಾವು ದೆಹಲಿಗೆ ಹೋದಾಗ ಎಲ್ಲಾ ಪಾರ್ಲಮೆಂಟು ಸದಸ್ಯರುಗಳೊಡನೆ ಕರೆತು ಯಾವ ರೀತಿ ಅನ್ಯಾಯವಾಗಿದೆ ಎನ್ನುವುದನ್ನೂ ಹೇಳಿ ಬಂದಿದ್ದೇವೆ.

ಶ್ರೀ ಜಿ. ಮಾದೇಗೌಡ.—ಕೇಂದ್ರ ಸರಕಾರಕ್ಕೆ ಮೈಸೂರು ರಾಜ್ಯದ ರೈಲು ರಸ್ತೆ ಸೇರುವುದಕ್ಕೆ ಮುಂಚೆ ಮದ್ದೂರು—ಮಳವಳ್ಳಿ—ಕೊಳ್ಳೆಗಾಲದವರೆಗೆ ರೈಲನ್ನು ಹಾಕಲು, ಆಗಿದ್ದ ರೈಲ್ವೆ ಇಲಾಖೆಯವರೂ ಸರ್ವೆ ಕೆಲಸ ಕೂಡ ಮಾಡಿದ್ದರು. ಕೇಂದ್ರ ಸರಕಾರಕ್ಕೆ ಪಟ್ಟಿಯನ್ನು ಕೊಡುವಾಗ ಇದನ್ನೂ ಸೇರಿಸಿಕೊಡಲು ಪ್ರಯತ್ನ ಮಾಡುತ್ತೀರಾ? ಅಲ್ಲದೆ ನಾಲ್ಕನೇ ಯೋಜನೆಯಲ್ಲಿ ಶಿಫಾರಸನ್ನು ಕಳುಹಿಸುವಾಗ ಮದ್ದೂರು—ಮಳವಳ್ಳಿ—ಕೊಳ್ಳೇಗಾಲದ ರೈಲನ್ನೂ ಪಟ್ಟಿಯಲ್ಲಿ ಸೇರಿಸಿ ಶಿಫಾರಸ್ಸು ಮಾಡುತ್ತೀರಾ?

ಶ್ರೀ ವೀರೇಂದ್ರಪಾಟೀಲ್.—ರೈಲ್ವೆ ಮಿನಿಸ್ಟ್ರಿಯವರು ಹೊಸ ರೈಲನ್ನು ಹಾಕುವುದಕ್ಕೆ ಕೆಲವು ಮುಖ್ಯವಾದ ಪಿನ್ಸ್‌ಪಲ್ಲುಗಳಿರಬೇಕೆಂದು ಇಟ್ಟುಕೊಂಡಿದ್ದಾರೆ. ಪ್ಯಾಸೆಂಜರುಗಳಿಗೆ ಅನುಕೂಲವಾಗುತ್ತದೆ ಎಂದು ಹೊಸ ರೈಲು ಮಾರ್ಗ ಹಾಕುವುದಕ್ಕೆ ತಯಾರಾಗಿಲ್ಲ. ಸಾಮಾನು ಸಾಗಾಣಿಕೆ ಎಷ್ಟು ಬರುತ್ತದೆ ಎನ್ನುವುದನ್ನೆಲ್ಲಾ ವರ್ಕ್‌ಜಾಟ್ ಮಾಡಿಕೊಂಡು ಹೋಗುತ್ತಾರೆ. ಅಲ್ಲದೆ ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಬರೀ ಪ್ಯಾಸೆಂಜರುಗಳು ಬರುತ್ತಾರೆ; ಅದರಿಂದ ರೈತಾಪಿ ಜನಕ್ಕೆ ಅನುಕೂಲವಾಗುತ್ತದೆ ಎಂದು ಯಾವ ರೈಲನ್ನೂ ಹಾಕುವುದಕ್ಕೆ ಆಗುವುದಿಲ್ಲ. ಪ್ಯಾಸೆಂಜರುಗಳ ಟ್ರಾಫಿಕ್‌ನ ಜೊತೆಗೆ ಗೂಡ್ಸ್ ಟ್ರಾಫಿಕ್ಕು ಕೂಡ ಹೆಚ್ಚಾಗಿದೆ ಎನ್ನುವುದಕ್ಕೆ ಆಯಾ ಪ್ರಾಂತ ಸರಕಾರದವರು ಸರಿಯಾದ ಅಂಕಿ ಅಂಶಗಳನ್ನು ಕೇಂದ್ರ ಸರಕಾರಕ್ಕೆ ಕೊಟ್ಟರೇನೇ ಅವರು ಆಗ ಪರಿಶೀಲನೆಗೆ ತೆಗೆದುಕೊಳ್ಳುತ್ತಾರೆ. ಬರೀ ರೈತರ ಅನುಕೂಲಕ್ಕಾಗಿ ಹೊಸದಾಗಿ ರೈಲನ್ನು ತೆಗೆಯುವ ಪರಿಸ್ಥಿತಿ ಇಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮೈಸೂರು ದೇಶಕ್ಕೆ ರೈಲಿನ ಅವಶ್ಯಕತೆ ಎಷ್ಟಿದೆ ಎನ್ನುವುದನ್ನು ತಿಳಿಯುವುದಕ್ಕೆ ಈಗ ಮೈಸೂರಿನವರೇ ಕೇಂದ್ರದಲ್ಲಿ ರೈಲ್ವೆ ಮಂತ್ರಿಗಳಾಗಿರುವಾಗ ಇಲ್ಲಿನ ಕಷ್ಟಸುಖಗಳು ಅವರಿಗೆ ಗೊತ್ತಿಲ್ಲವೇ?

ಶ್ರೀ ವೀರೇಂದ್ರಪಾಟೀಲ್.—ಹೊಸದಾಗಿ ಬಂದಿರುವ ರೈಲ್ವೆ ಮಂತ್ರಿಗಳು ಎಷ್ಟು ದಿವಸದಿಂದ ರೈಲ್ವೆ ಮಂತ್ರಿಗಳಾಗಿದ್ದಾರೆನ್ನುವುದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಅವರಿಗೂ ಎಲ್ಲ ವಿಷಯ ಗಳನ್ನೂ ತಿಳಿಸಲಾಗಿದೆ ಅಲ್ಲದೆ ನಮಗಿಂತಲೂ ಅವರಿಗೆ ಇನ್ನೂ ಹೆಚ್ಚು ಗೊತ್ತಿದೆ ಎಂದು ಇಷ್ಟು ಮಾತ್ರ ಹೇಳಬಲ್ಲೆ.

ಶ್ರೀ ಎಸ್. ಪಿ. ಹಾಯುದೆ.—ಕಾರವಾರದ ರೈಲ್ವೆ ಲೈನು ಏನಾಯಿತು?

ಶ್ರೀ ವೀರೇಂದ್ರ ಪಾಟೀಲ್. —ಕಾರವಾರ—ಹುಬ್ಬಳ್ಳಿ ರೈಲಾಗಬೇಕೆಂದು ಅನೇಕ ವರ್ಷ ಗಳಿಂದಲೂ ಪ್ರಯತ್ನ ಮಾಡುತ್ತಲೇ ಇದ್ದೇವೆ.

ಶ್ರೀ ಎಸ್. ಗೋಪಾಲಸ್ವಾಮಿನ್ನ.—ರೈಲ್ವೆ ಮಂತ್ರಿಗಳು ಪಣಂಬೂರು ಭಾಗದ ರೈಲನ್ನು ಉದ್ಘಾಟಿಸಿದರು. ಆದರೆ ಮಂಗಳೂರು ಭಾಗದ ರೈಲಿನ ಬಗ್ಗೆ ಮಂಜೂರಾತಿ ಪೂರ್ಣವಾಗಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಹಾಸನ-ಮಂಗಳೂರು ರೈಲಾಗದೇ ಮಂಗಳೂರು ಪೋರ್ಟು ಕಟ್ಟುವುದಕ್ಕೆ ಬೇಕಾದ ಸಾಮಗ್ರಿಗಳನ್ನು ಸಾಗಿಸಲು ತೊಂದರೆಯಾಗಿರುವುದರಿಂದ ಹಾಗೂ ಪಣಂಬೂರು ಕಡೆಯಿಂದ ಸಾಗಿಸಬೇಕಾದರೆ ಖರ್ಚು ಬಹಳ ಹೆಚ್ಚಾಗುವುದರಿಂದ ಆದಷ್ಟು ಜಾಗ್ರತೆ ಈ ಲೈನನ್ನು ಮಾಡಬೇಕೆಂದು ಸರ್ವ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—(ಸಿ)ಗೆ ಕೊಟ್ಟಿರುವ ಉತ್ತರದಂತೆ ರಾರಿ ಟ್ರಾನ್ಸ್‌ಪೋರ್ಟು ವಿಚಾರದಲ್ಲಿ ಸರಕಾರದವರೇ ತೆಗೆದುಕೊಂಡು ಅದಕ್ಕೊಂದು ಕಾರ್ಪೊರೇಷನ್ನು ಮಾಡಿಕೊಳ್ಳುವಂತೆ ಕಾರ್ಯಕ್ರಮವನ್ನೇನಾದರೂ ಹಾಕಿಕೊಂಡಿದ್ದೀರಾ?

ಶ್ರೀ ಕೆ. ಮಲ್ಲಪ್ಪ.—ಬೇಕಾದಷ್ಟು ಖಾಸಗೀ ರಾರಿಗಳು ಬೆಂಗಳೂರಿನಿಂದ ಬೊಂಬಾಯಿ ಹಾಗೂ ಮದರಾಸು ಕಡೆಗಳಿಗೆ ಓಡಾಡುತ್ತಿವೆ. ಇದನ್ನು ಸರಕಾರ ತೆಗೆದುಕೊಳ್ಳುವ ಅಭಿಪ್ರಾಯ ಏಲ್ಲ. ಇಂಟರು ಸ್ಟೇಟು ಟ್ರಾನ್ಸ್‌ಪೋರ್ಟು ಆಗಿರುವುದರಿಂದ ಇದನ್ನು ಸರಕಾರ ಕಾರ್ಪೋರೇಷನ್ನು ಮಾಡಿ ತೆಗೆದುಕೊಳ್ಳುವುದು ಕಷ್ಟ.

Sri C. J. MUCKANNAPPA.—May I know whether besides claiming railway facilities, Government have pressed for other facilities also?

Sri K. MALLAPPA.—We are trying to develop major and minor ports.

Mr. SPEAKER.—Has the Hon'ble Member read that for the first time a port in this State has exported manganese ore, which it had not done before?

Sri C. J. MUCKANNAPPA.—I am thinking of the development of road facilities.

†Sri VEERENDRA PATIL.—The Hon'ble Member is aware that we are getting financial assistance from the Government of India for providing other facilities. We have taken up a number of ore-carrying roads, on which we are spending huge amounts. The Banasandra—Hassan—Mangalore road is itself getting nearly 4 crores 58 lakhs.

Sri SANJEEVANATH AIKALA.—I am aware that work in conn ction with the Mangalore—Panambore railway line is being carried on briskly. But it would perhaps be a metre guage line. Would the State Government press the Centre to convert it to broad guage ?

Mr. SPEAKER.—The Member is putting wrong supplementaries. Mangalore broad guage line is being extended. Panambore, as he knows, is on Madras—Mangalore line, which is also broad guage.

Sri SANJEEVANATH AIKALA.—There is a two-mile circuit which is in metre guage.

Mr. SPEAKER.—If Mangalore—Hassan is going to be metre guage, it has to be a combined guage.

ಶ್ರೀ ಶರಣಪ್ಪ.—ಶಹಾಬಾದಿನಲ್ಲಿ ಸಿಮೆಂಟ್ ಇಜ, ಹಟ್ಟಿಯಲ್ಲಿ ಬಂಗಾರದ ಗಣಿ ಇದೆ, ಬಾಗಲಕೋಟೆಯಲ್ಲಿ ಸಿಮೆಂಟ್ ಫ್ಯಾಕ್ಟರಿ ಇದೆ. ಆದ್ದರಿಂದ ಶಹಾಬಾದಿನಿಂದ ಬಾಗಲಕೋಟೆಗೆ ವಯ ಹಟ್ಟಿ ರೈಲ್ವೆ ಲೈನು ಹಾಕುವುದಕ್ಕೆ ಇದುವರೆಗೆ ಕೇಂದ್ರಸರಕಾರಕ್ಕೆ ಬರೆದಿರುವುದರಲ್ಲಿ ಸೂಚನೆ ಇದೆಯೆ ?

ಶ್ರೀ ಕೆ. ಮಲ್ಲಪ್ಪ.—ಈ ಸೂಚನೆ ಮಾಡಿಲ್ಲ, ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಚಿತ್ರದುರ್ಗ-ಚಿಕ್ಕಜಾಜೂರು ಲೈನು, ಅಥವಾ ಬಳ್ಳಾರಿ-ರಾಯದುರ್ಗ ರೈಲನ್ನು ಚಳ್ಳಕೆರೆ ಮಾರ್ಗವಾಗಿ ಎಕ್ಸ್‌ಟೆಂಡ್ ಮಾಡಬೇಕೆಂದು ಅನೇಕ ವರ್ಷಗಳಿಂದ ಆಲೋಚನೆ ಇದೆ. ಸಂಬಂಧಪಟ್ಟ ಇಲಾಖೆಗಳಿಂದ ಸರಕಾರ ಇನ್‌ಫರ್ಮೇಷನ್ನೂ ಸಂಗ್ರಹಿಸಿದೆ. ಅದು ಏನಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನೂ ಪ್ರಯತ್ನ ಮಾಡುತ್ತಾ ಇದ್ದೇವೆ; ಆದರೆ ಕೇಂದ್ರ ಸರಕಾರದವರು ಇನ್ನೂ ಒಪ್ಪಿಕೊಂಡಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಈ ಹೊಸ ರೈಲ್ವೆ ಮಾರ್ಗಗಳು ಆಗುವುದು ಹಾಗಿರಲಿ. ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನು ಮತ್ತು ದಂಡಿನ ರೈಲ್ವೆ ಸ್ಟೇಷನ್ನನ್ನು ರೆನೊವೇಟ್ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಬೆಂಗಳೂರು ರೈಲ್ವೆ ಸ್ಟೇಷನ್ ರೆನೊವೇಟ್ ಮಾಡುವುದರ ನಲುವಾಗಿ 27 ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಕೇಂದ್ರ ಸರಕಾರದ ಆರ್ಕಿಟೆಕ್ಟು ಮತ್ತು ನಮ್ಮ ಗವರ್ನಮೆಂಟ್ ಆರ್ಕಿಟೆಕ್ಟು ಇಬ್ಬರೂ ಸೇರಿ ಇನ್ನೂ ದೊಡ್ಡ ಪ್ರಮಾಣದಲ್ಲಿ ರೆನೊವೇಟ್ ಮಾಡುವ ವಿಚಾರವನ್ನು ಇಟ್ಟುಕೊಂಡು ಒಂದು ಒಳ್ಳೆಯ ಪ್ಲಾನ್ ತಯಾರಿಸಿದರು. ಕೇಂದ್ರಸರಕಾರದ ರೈಲ್ವೆ ಮಿನಿಸ್ಟ್ರಿಗೆ ಒಂದುವರೆ-ಎರಡುಕೋಟಿ ರೂಪಾಯಿ ವರಗೆ ಖರ್ಚಾಗುವ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಬರೆದು ಒತ್ತಾಯ ಮಾಡುತ್ತಾ ಇದ್ದೇವೆ.

ಶ್ರೀ ಜಿ. ಮಾದೇಗೌಡ.—ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಜನರಲ್ ಆಗಿ ಉತ್ತರ ಕೊಟ್ಟರು. ಸತ್ಯಮಂಗಲಂ-ಮದ್ದೂರು ರೈಲ್ವೆ ಮಾರ್ಗವನ್ನು ಹಿಂದೆ ಸರಕಾರದವರು ಯೋಚನೆ ಮಾಡಿದ್ದರು. ಅದು ಜನಗಳ ಸೌಕರ್ಯ ದೃಷ್ಟಿಯಿಂದ ಮತ್ತು ಕೈಗಾರಿಕೆಯ ಅಭಿವೃದ್ಧಿಯ ದೃಷ್ಟಿಯಿಂದ ಅತಿ ಮುಖ್ಯವಾದ ರೈಲ್ವೆ ಮಾರ್ಗವಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಸರ್ವೆ ಮಾಡಿದ್ದರು. ಈ ಒಂದು ದೃಷ್ಟಿಯಿಂದ ಈ ರೈಲ್ವೆ ಮಾರ್ಗವನ್ನು 4ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಈ ಸಭೆಗೆ ಭರವಸೆ ಕೊಡಬಲ್ಲರಾ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲಿನಿಂದಲೂ ನಾವು ಕೇಂದ್ರ ಸರಕಾರಕ್ಕೆ ಚಾಮರಾಜನಗರ—ಸತ್ಯಮಂಗಲಂ ರಸ್ತೆಯನ್ನು ಒತ್ತಾಯಪಡಿಸುತ್ತಿದ್ದೇವೆ. ಆಗ ಕೇಂದ್ರ ಮಂತ್ರಿಯಾಗಿದ್ದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು ಪಾರ್ಲಮೆಂಟಿನಲ್ಲಿ ಅದನ್ನು ಮಾಡಿಕೊಡುತ್ತೇವೆಂದು

ಭರವಸೆ ಕೊಟ್ಟಿದ್ದರು. ಆ ಆಶ್ವಾಸನೆಯನ್ನು ಇವೊತ್ತು ಈಡೇರಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ನಾಲ್ಕನೆ ಯೋಜನೆಯಲ್ಲಿ ಸೇರಿಸುವುದಕ್ಕೆ ಏನೇನು ಸಾಧ್ಯವೋ ಎಲ್ಲ ಪ್ರಯತ್ನ ಗಳನ್ನೂ ಮಾಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.— ಜನತೆಯ ಕಲ್ಯಾಣವೆ ಅಲ್ಲದೆ ಸಂಪಾದನೆಯ ದೃಷ್ಟಿಯಿಂದ ರೈಲ್ವೆ ಮಾರ್ಗಗಳು ರಚನೆಗೆ ಹೆಚ್ಚಿನ ಗಮನ ಕೊಡಲಾಗುತ್ತದೆಂದು ಹೇಳಿದಿರಿ. ಚಿಕ್ಕಮಗಳೂರಿನಿಂದ ಕಬ್ಬಿಣ ಮತ್ತು ಮ್ಯಾಂಗನೀಸ್ ಹೆಚ್ಚಾಗಿ ಬಂದರಿಗೆ ಹೋಗಬೇಕಾಗಿರುವುದರಿಂದ, ಚಿಕ್ಕಮಗಳೂರಿಗೆ ರೈಲ್ವೆ ಮಾರ್ಗ ಹಾಕುವುದಕ್ಕೆ 4ನೆಯ ಯೋಜನೆಯಲ್ಲಿ ಸೇರಿಸಿ ರೆಕಮೆಂಡ್ ಮಾಡುತ್ತೀರ ?

ಶ್ರೀ ವೀರೇಂದ್ರ ಪಾಟೀಲ್.— ರೆಕಮೆಂಡ್ ಮಾಡುವುದನ್ನು ನಾವು ಏನೂ ಕಡಮೆ ಮಾಡು ವುದಿಲ್ಲ. ಆದರೆ ಅನೇಕ ಮಾರ್ಗಗಳನ್ನು ನಾವು ಕೇಳಿ ಆಮೇಲೆ ಒಂದೂ ಸಿಕ್ಕದ ಪರಿಸ್ಥಿತಿ ಉಂಟಾಗಬಾರದು. ಬಂದ ಬೇಡಿಕೆಗಳನ್ನೆಲ್ಲಾ ನಾವು ಅದರ ಎಕನಾಮಿಕ್ಸ್ ನೋಡದೆ ಫರ್ವಾರ್ಡ್ ಮಾಡಿದರೆ ನಮ್ಮ ಶಿಫಾರಸ್ಸುಗಳಿಗೆ ಕಿಮ್ಮತ್ತು ದೊರಕಲಾರದು. ಹಾಗಾಗಬಾರದು. ನಾವು ಯಾವ ಮಾರ್ಗಗಳಿಗೆ ಪ್ರಯಾರಿಟಿ ಕೊಡಬೇಕೆಂಬುದನ್ನು ವಿಚಾರ ಮಾಡಬೇಕು. ಇದನ್ನು ಗಮನದಲ್ಲಿಟ್ಟು ಕೊಂಡು, ಪ್ರಪೋಸಲ್‌ಗಳನ್ನು ಫೈನಲೈಸ್ ಮಾಡಿಕೊಂಡು ಕೇಂದ್ರದಲ್ಲಿ ಪ್ರೆಸ್ ಮಾಡಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಶೇಷಾದ್ರಿಪುರ ಅಂಡರ್‌ಬ್ರಿಡ್ಜ್ ಡಿಫೆಕ್ಟೀವ್ ಆಗಿರುವುದರಿಂದ ಓಡಾಡುವ ಜನಗಳಿಗೆ ಬಹಳ ತೊಂದರೆಯಾಗಿದೆ. ಅದನ್ನು ತಪ್ಪಿಸಲು ಏನು ಪ್ರಯತ್ನ, ಸೇಫ್ ಗಾರ್ಡ್ ತೆಗೆದುಕೊಳ್ಳುತ್ತೀರ ?

Mr. SPEAKER.—How does this supplementary come under this ?

ಶ್ರೀ ಎಂ. ಶ್ರೀನಿವಾಸನಾಯಕ್.—ಪಶ್ಚಿಮ ಕರಾವಳಿಯಲ್ಲಿ ಮಂಗಳೂರು—ಉಡುಪಿ—ಕುಂದಾಪುರ—ಕಾರವಾರ ಮಾರ್ಗವಾಗಿ ಗೋವೆಗೆ ಮತ್ತು ಬೊಂಬಾಯಿವರೆಗೆ ಹೋಗುವ ರೈಲ್ವೆ ಮಾರ್ಗವನ್ನು ಮಾಡಬೇಕೆಂದು ಒಂದು ಪ್ರಪೋಸಲ್ ಇತ್ತು. ಈ ವಿಚಾರದಲ್ಲಿ ಸರಕಾರ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರಕಾರದವರು ವೆಸ್ಟ್‌ಕೋಸ್ಟ್‌ರೋಡು ಮಾಡುತ್ತಾ ಇದ್ದಾರೆ. ಮಾನ್ಯ ಸದಸ್ಯರು ರೈಲ್ವೆ ಲೈನು ಅಲಾಂಗ್ ದಿ ಕೋಸ್ಟ್ ಆಗಬೇಕು ಎನ್ನುತ್ತಾರೆ. ಅದು ಒಂದು ಸಜೆಷನ್.

(*Some Hon'ble Members rose up.*)

Mr. SPEAKER.—How much time do the Members want to spend on one question ? Hereafter, I would be compelled to put down only two questions in the list of questions everyday.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೇಡ, ಸ್ಯಾಮಿ.

ಶ್ರೀ ಗಂಗಾಧರ ನಾಮೋಷಿ.—ಮೇಲ್ಮನೆಯಲ್ಲಿ ಇದು 3 ದಿವಸ ಚರ್ಚೆಯಾಗಿದೆ. ಇಲ್ಲಿಯೂ ಸಾಕಷ್ಟು ಟೈಮ್ ಕೊಡಿ.

ಅಧ್ಯಕ್ಷರು.— ಮಾನ್ಯ ಸದಸ್ಯರೂ ಒಂದು ರೆಸಲೂಷನ್ ಸೂಚಿಸಬಹುದು.

ಶ್ರೀ ಎಸ್. ಎಂ. ಕೃಷ್ಣ.—ನಿಪ್ಪಾಣಿ, ಸಂಕೇಶ್ವರ, ಬಾಗಲಕೋಟೆ ಲೈನು ಸರ್ವೆಮಾಡಿದ್ದಾರೆ. ಅದು ಯಾವ ಸ್ಟೇಜಿನಲ್ಲಿದೆ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಬಗ್ಗೆ ಇನ್‌ಫರ್ಮೇಷನ್ ಇಲ್ಲ, ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

Sri N. O. SAMAJI.—(Marathi)

Mr. SPEAKER.—That was asked three times, not once.

ಶ್ರೀ ಕೆ. ದೇವಯ್ಯ.—ಬೆಂಗಳೂರಿನಿಂದ ಪ್ಯಾಸೆಂಜರ್ ಮತ್ತು ಗೂಡ್ಸ್‌ಟ್ರಾಫಿಕ್ ದೆಹಲಗೆ ಹೋಗಬೇಕಾದರೆ ಬೊಂಬಾಯಿ ಮದ್ರಾಸ್ ಮೂಲಕ ಹೋಗಬೇಕು. ಮೈಸೂರು ರಾಜ್ಯದಿಂದ ನೇರವಾಗಿ ದೆಹಲಗೆ ರೈಲ್ವೇಮಾರ್ಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರ ?

[*No answer*]

Mr. SPEAKER—.Question hour is over :